# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 41 (365)
ಸದಸ್ಯರ ಹೆಸರು : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ : 19.08.2026
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಯವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ರೈತರ ಸುಮಾರು 13000 ಪಹಣಿಗಳಲ್ಲಿ ಸರ್ಕಾರಿ ಫಡಾ ಎಂದು ನಮೂದಾಗಿದ್ದು, ರೈತರು ತಿದ್ದುಪಡಿಗಳಿಗಾಗಿ ನಿತ್ಯವು ತಾಲ್ಲೂಕು ಕಚೇರಿಗಳಿಗೆ ಅಲೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದಲ್ಲಿ, ರೈತರು ಎಷ್ಟು ವರ್ಷಗಳ ಕಾಲ ಭೂ ಕಂದಾಯ ಪಾವತಿಸದಿದ್ದಲ್ಲಿ ಅವರ ಜಮೀನುಗಳನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳಬಹುದು ಅಥವಾ ಸರ್ಕಾರಿ ಫಡಾ ಎಂದು ಪರಿಗಣಿಸಬಹುದು: ಈ ಸಂಬಂಧ ಸರ್ಕಾರವು ಹೊರಡಿಸಿರುವ ಆದೇಶ/ನಿಯಮಗಳ ಸಂಪೂರ್ಣ ಮಾಹಿತಿ ನೀಡುವುದು; | ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 159ರಂತೆ ಯಾವುದೇ ರೆವಿನ್ಯೂ ವರ್ಷದ ಬಗ್ಗೆ ವಿಧಿಸಬಹುದಾದ ಭೂ ಕಂದಾಯವನ್ನು ಪಾವತಿ ಮಾಡಬೇಕಾದ ಹೊಣೆಯು ಆ ವರ್ಷದ ಮೊದಲನೆಯ ದಿನದಂದು ಉದ್ಭವಿಸುತ್ತದೆ. ಭೂ ಕಂದಾಯ ಬಾಕಿ ಸಂದಾಯವಾಗದ ಸಂದರ್ಭದಲ್ಲಿ ಕಲಂ 162ರನ್ವಯ ಖಾತೆದಾರನಿಗೆ ತಗಾದೆ ನೋಟಿಸ್ ಜಾರಿಗೊಳಿಸಲಾಗುತ್ತದೆ. ಕಂದಾಯ ಬಾಕಿ ಸಂದಾಯವಾಗದ ಸಂದರ್ಭದಲ್ಲಿ ಅಂಥ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 163ರಂತೆ ಮುಟ್ಟುಗೋಲು ಹಾಕಿಕೊಳ್ಳಲು ಅವಕಾಶವಿರುತ್ತದೆ. |
| ಇ) | 2015 ಕ್ಕೂ ಹಿಂದಿನ ಮತ್ತು ನಂತರದಲ್ಲಿ ಸರ್ಕಾರಿ ಫಡಾ ಎಂದು ಪಹಣಿಗಳಲ್ಲಿ ನಮೂದಿಸಿರುವುದನ್ನು ತೆಗೆದುಹಾಕಿ ಸಾವಿರಾರು ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಳಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಸರ್ಕಾರ ಚಿಂತಿಸಿದೆಯೇ; ಯಾವ ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳುವುದು? (ಮಾಹಿತಿ ನೀಡುವುದು) | ಭೂ ಕಂದಾಯ ಬಾಕಿಯಿರುವ ಜಮೀನುಗಳನ್ನು ಖಾತೆದಾರರಿಗೆ ಪುನಃ ಸ್ಥಾಪಿಸಲು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 119(2)ರಡಿ ಈ ಹಿಂದೆ ದಿನಾಂಕ: 07.12.2012 ರಿಂದ 06.09.2014ರವರೆಗೆ ಅವಕಾಶ ಕಲ್ಪಿಸಲಾಗಿತ್ತು.<br><br>ಸದರಿ ಅವಧಿಯು ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ಅವಧಿಯನ್ನು ವಿಸ್ತರಿಸಲು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 119(2)ಕ್ಕೆ ತಿದ್ದುಪಡಿ ಮಾಡಿ ಸರ್ಕಾರದ ಅಧಿಸೂಚನೆ ಸಂಖ್ಯೆ: RD 17 LGP 2023, ದಿನಾಂಕ: 23.03.2023ರಂತೆ ಕರಡು ನಿಯಮಗಳನ್ನು ಹೊರಡಿಸಲಾಗಿದೆ. ಅಂತಿಮ ಅಧಿಸೂಚನೆ ಹೊರಡಿಸುವ ಕ್ರಮವು ಸರ್ಕಾರದ ಪರಿಶೀಲನೆಯ ಹಂತದಲ್ಲಿದೆ. |

ಸಂಖ್ಯೆ: RD-LGQ/147/2026

(ಡಾ. ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ